ಇ) ಇಲ್ಲ.

ವಿಷಯ : ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೊಂದಾಯಿಸಿರುವುದರ ಸಂಖ್ಯೆ.

Q : 218

ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಔರಾದ್) : ಮಾನ್ಯ ಕಾರ್ಮಿಕ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ?

ಅ) 31ನೇ ಜನವರಿ 1993ರವರೆಗೆ ರಾಜ್ಯದ ವಿವಿಧ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಉದ್ಯೋಗದ ಸಲುವಾಗಿ ತಮ್ಮ ಹೆಸರನ್ನು ನೋಂದಣಿ ಮಾಡಿಸಿರುವ ಅಭ್ಯರ್ಥಿಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು)

ಆ) ಉದ್ಯೋಗ ವಿನಿಮಯ ಕೇಂದ್ರದಲ್ಲಿ ಅಭ್ಯರ್ಥಿಯು ತನ್ನ ಹೆಸರನ್ನು ನೋಂದಣಿ ಮಾಡಿಸುವ ಸಂದರ್ಭದಲ್ಲಿ ಸರ್ಕಾರಿ ಕೆಲಸಕ್ಕೆ ಸೇರುವ ವಯೋಮಿತಿಯನ್ನು ಹೊಂದಿದ್ದು ಸುಮಾರು 10-12 ವರ್ಷಗಳಾದರೂ ಆತನಿಗೆ ಯಾವುದೇ ಸಂದರ್ಶನ ಬಾರದೇ (ಉದ್ಯೋಗ ವಿನಿಮಯ ಕೇಂದ್ರದಿಂದ) ಇದ್ದಾಗ ಅವನ ವಯೋಮಿತಿ ಮೀರಿ ಹೋದಲ್ಲಿ ಅವನಿಗೆ ಉದ್ಯೋಗ ವಿನಿಮಯ ಕೇಂದ್ರದಿಂದ ವಯೋಮಿತಿ ಮೀರಿದ ನಂತರವೂ ಸಂದರ್ಶನವನ್ನು ಕಳುಹಿಸಿಕೊಡುವ ಪದ್ಧತಿ ಇದೆಯೇ?

ಇ) ಇಲ್ಲದಿದ್ದಲ್ಲಿ, ಆ ಪದ್ಧತಿಯನ್ನು ಜಾರಿಗೊಳಿಸಲಾಗುವುದೇ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) :

ಅ) 31ನೇ ಜನವರಿ 1993ರಂದು ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳ ದಾಖಲೆಯಲ್ಲಿ 15,02,218 ಅಭ್ಯರ್ಥಿಗಳು ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಉದ್ಯೋಗಾಕಾಂಕ್ಷಿಗಳಾಗಿರುತ್ತಾರೆ. (ಜಿಲ್ಲಾವಾರು ಅಂಕಿ ಅಂಶಗಳನ್ನು ಅನುಬಂಧದಲ್ಲಿ ಕೊಡಲಾಗಿದೆ).

ಆ) ಇಂತಹ ಪದ್ಧತಿ ಜಾರಿಯಲಿಲ್ಲ.

ಇ) ಇಲ್ಲ.

<u>ಅನುಬಂಧ</u>

31-1-1993ರಂದು ರಾಜ್ಯದ ಉದ್ಯೋಗ ವಿನಿಮಯ ಕಚೇರಿಗಳ ದಾಖಲೆಯಲ್ಲಿದ್ದ ಅಭ್ಯರ್ಥಿಗಳ ಜಿಲ್ಲಾವಾರು ಮಾಹಿತಿ.

ಕ್ರಮ ಸಂಖ್ಯೆ	ಜಿಲ್ಲೆ	ಪುರುಷರು	ಮಹಿಳೆಯರು	ಒಟ್ಟು
1.	ಬೆಂಗಳೂರು.	341546	98845	440391
2.	ಬೆಳಗಾವಿ.	84991	13982	98973
3.	ಬಳ್ಳಾರಿ.	44353	7890	52243

1	2	3	4	5
4.	ಬೀದರ್.	35711	5216	40927
5.	ಬಿಜಾಪುರ.	60248	9751	69999
6.	ಚಿಕ್ಕಮಗಳೂರು.	23789	8179	31968
7.	ಚಿತ್ರದುರ್ಗ.	48873	12597	61470
8.	ಧಾರವಾಡ.	82973	18274	101247
9.	ಗುಲ್ಬರ್ಗಾ.	49618	8369	57987
10.	ಹಾಸನ.	35312	6879	42191
11.	ಕೊಡಗು.	8909	5217	14126
12.	ಕೋಲಾರ.	44827	9385	54212
13.	ಮಂಡ್ಯ.	28571	8979	37550
14.	ಮೈಸೂರು.	68587	19081	87668
15.	ಉತ್ತರ ಕನ್ನಡ.	31887	12702	44589
16.	ರಾಯಚೂರು.	38019	6143	44162
17.	ಶಿವಮೊಗ್ಗ.	50471	14573	65044
18.	ದಕ್ಷಿಣ ಕನ್ನಡ.	47423	27046	74469
19.	ತುಮಕೂರು.	64730	18272	83002
	ಒಟ್ಟು	1190838	311380	1502218

ವಿಷಯ :- ಬಾಲ ಕಾರ್ಮಿಕರ ಕಲ್ಯಾಣಕ್ಕಾಗಿ ಸರ್ಕಾರ ರೂಪಿಸಿರುವ ಯೋಜನೆಗಳು.

Q : 217

ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಔರಾದ್) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಬಾಲ ಕಾರ್ಮಿಕರು ಹಾಗೂ ಚಿಂದಿ ಆಯುವ ಮಕ್ಕಳ ಕಲ್ಯಾಣಕ್ಕಾಗಿ ಯೋಜನೆಯನ್ನೇನಾದರೂ ರೂಪಿಸಿದೆಯೇ?

ಆ) ಈ ಮಕ್ಕಳಿಗೆ ಉತ್ತಮವಾದ ಭವಿಷ್ಯವನ್ನು ರೂಪಿಸಲು ಸರ್ಕಾರ ಇದುವರೆವಿಗೂ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ?

ಇ) ಇದಕ್ಕಾಗಿ ಖರ್ಚು ಮಾಡಲಾಗುತ್ತಿರುವ ಹಣವೆಷ್ಟು?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು.

ಆ) ಚಿಂದಿ ಆಯುವ ಮತ್ತು ಬೀದಿ ಮಕ್ಕಳ ಕಲ್ಯಾಣ ಮತ್ತು ಪುನರ್ವಸತಿ